*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಮೆಯೋಹಾಲ್*
*ಘಟಕ, ಬೆಂಗಳೂರು*
***(58ನೇ ನಗರ ಸಿವಿಲ್ ನ್ಯಾಯಾಂಗಣ)***

*ದಿನಾಂಕಃ 21ನೇ ಮಾಹೆ ಜನವರಿ, 2020*

*-ಃ ಉಪಸ್ಥಿತರು ಃ-*

*ಶ್ರೀ ಬಾಬಾಸಾಹೇಬ್ ಎಲ್. ಜಿನರಾಳ್ಕರ್, ಎಂ.ಎ., ಎಲ್‌ಎಲ್.ಎಂ.,*
*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು*

*<u>ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆ 25008/2020</u>*

ಅರ್ಜಿದಾರಳು/ಃ (2ನೇ ಆರೋಪಿತೆ)

ಸಿಂತಿಯಾ ಜೆನಿಫರ್ ಶಿಕಂದ,
ಬಿನ್ಃ ಮ್ಯಾಕೆನ್‌ಜಿ ಸೈಮನ್ ಅಲಿಯಾಸ್ ಶಿಕಂದ,
ಸುಮಾರು 27 ವರ್ಷ, ವಾಸಃ ನಂಬರ್ 306,
ಎಎಚ್ ಆಸ್ಟರ್ ಅಪಾರ್ಟ್‌ಮೆಂಟ್, 001,
1ನೇ ಫ್ಲೋರ್, 6ನೇ ಎ ಕ್ರಾಸ್,
3ನೇ ಮುಖ್ಯ ರಸ್ತೆ, ಓಎಂಬಿಆರ್ ಲೇಔಟ್,
ಬೆಂಗಳೂರು-560043.

(ಪರವಾಗಿ ಶ್ರೀ ಅಲಿಯೆನ್ಸ್ ಲಾ ಅಸೋಸಿಯೇಟ್ಸ್, ವಕೀಲರು)

- ವಿರುದ್ಧ –

ಎದುರುದಾರರುಃ ರಾಜ್ಯದ ಪರವಾಗಿ ಬಾಣಸವಾಡಿ ಪೊಲೀಸ್ ಠಾಣೆ,
ಬೆಂಗಳೂರು ನಗರ.
(ಪರವಾಗಿ ಸರ್ಕಾರಿ ಅಭಿಯೋಜಕರು)

*****

## ದಂಡ ಪ್ರಕ್ರಿಯಾ ಸಂಹಿತೆ ಕಲಂ 439ರಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶ

ಈ ಅಪರಾಧಿಕ ಸಂಕೀರ್ಣ ಅರ್ಜಿಯನ್ನು ಅರ್ಜಿದಾರಳು/2ನೇ ಆರೋಪಿತೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 439 ರಡಿಯಲ್ಲಿ ಸಲ್ಲಿಸಿ, ಬೆಂಗಳೂರು, ಮೆಯೋ ಹಾಲ್ ಘಟಕದ 11ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ನ್ಯಾಯಾಲಯದಲ್ಲಿ ತನ್ನ ವಿರುದ್ಧ ಬಾಣಸವಾಡಿ ಪೊಲೀಸ್ ಠಾಣೆಯ ಕ್ರೈಮ್ ನಂಬರ್ 702/2019ರಲ್ಲಿ ಭಾರತ ದಂಡ ಸಂಹಿತೆ ಕಲಂ 370 ಹಾಗೂ 3, 4 ಮತ್ತು 5 ಐಟಿಪಿರಡಿಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಯಮಿತ ಜಾಮೀನು ನೀಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದಾಳೆ.

2. ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ:-

ಅರ್ಜಿದಾರಳು ಅಮಾಯಕಳಿದ್ದು, ಈ ಪ್ರಕರಣದಲ್ಲಿ ಆರೋಪಿಸಿದಂತಹ ಯಾವುದೇ ಕೃತ್ಯಗಳನ್ನು ಎಸಗಿರುವುದಿಲ್ಲವೆಂದೂ, ಪೊಲೀಸರು ತನ್ನನ್ನು ಈ ರೀತಿಯ ಸುಳ್ಳು ಪ್ರಕರಣದಲ್ಲಿ ಸಿಲುಕಿಸಿದ್ದಾರೆಂದೂ, ತನ್ನ ವಿರುದ್ಧ ಮಾಡಿರುವ ಆಪಾದನೆಗಳು ಸತ್ಯಕ್ಕೆ ದೂರವಾಗಿರುತ್ತದೆ ಎಂದೂ, ತನಗೆ ಯಾವುದೇ ಅಪರಾಧಿಕ ಹಿನ್ನೆಲೆ ಇರುವುದಿಲ್ಲವೆಂದೂ, ಆರೋಪಿಸಿದಂತಹ ಅಪರಾಧಗಳ್ಯಾವುವು ಕಡ್ಡಾಯವಾಗಿ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವಂತಹ ಅಪರಾಧಗಳಲ್ಲವೆಂದೂ, ತನಗೆ ನಿಯಮಿತ ಜಾಮೀನು ಮಂಜೂರು ಮಾಡದೆ ಇದ್ದಲ್ಲಿ ತುಂಬಲಾರದ ತೊಂದರೆಯಾಗುತ್ತದೆ ಎಂದೂ, ನ್ಯಾಯಾಲಯ ವಿಧಿಸುವ

ಎಲ್ಲಾ ಷರತ್ತುಗಳನ್ನು ಪಾಲಿಸಲು ಮತ್ತು ಸೂಕ್ತ ಜಾಮೀನುದಾರರನ್ನು ನೀಡಲು ತಾನು ಸಿದ್ದಳಿದ್ದೇನೆಂದೂ ಹೇಳಿ, ತನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿದ್ದಾಳೆ.

3. ಸರ್ಕಾರಿ ಅಭಿಯೋಜಕರು ಸಲ್ಲಿಸಿರುವ ತಕರಾರಿನಲ್ಲಿ, ಅರ್ಜಿದಾರಳು/2ನೇ ಆರೋಪಿತಳು ಇನ್ನೊಬ್ಬ ಆರೋಪಿಯೊಂದಿಗೆ ಸೇರಿಕೊಂಡು ಬೇರೆ ರಾಜ್ಯಗಳಿಂದ ಮಹಿಳೆಯರನ್ನು ಮಾನವ ಕಳ್ಳ ಸಾಗಾಣಿಕೆ ಮಾಡಿ ಕರೆತಂದು ಅಕ್ರಮವಾಗಿ ಹಣಗಳಿಸುವ ಉದ್ದೇಶದಿಂದ ಈ ರೀತಿಯ ಕೃತ್ಯಗಳನ್ನು ಎಸಗಿದ್ದು, ಈಕೆ ಇದೇ ರೀತಿಯ ಕೃತ್ಯಗಳನ್ನು ಎಸಗುವ ಕುಖ್ಯಾತಿ ಪಡೆದಿದ್ದು ಮಹಿಳೆಯರನ್ನು ಕೆಲಸ ಕೊಡಿಸುವ ನೆಪದಲ್ಲಿ ಬೆಂಗಳೂರಿಗೆ ಕರೆದುಕೊಂಡು ಬಂದು ಅವರನ್ನು ವೇಶ್ಯಾವಾಟಿಕೆಗೆ ಉಪಯೋಗಿಸಿದ್ದು ಇದ್ದು, ಈ ಹಂತದಲ್ಲಿ ಈಕೆಯನ್ನು ಜಾಮೀನಿನ ಮೇಲೆ ಬಿಟ್ಟಲ್ಲಿ ಸಾಕ್ಷಿಗಳನ್ನು ಹೆದರಿಸಿ, ಬೆದರಿಸಿ ಸಾಕ್ಷ್ಯ ನುಡಿಯದಂತೆ ಮಾಡುವ, ಮತ್ತೇ ಇದೇ ರೀತಿಯ ಕೃತ್ಯಗಳಲ್ಲಿ ಭಾಗಿಯಾಗುವ, ಅಭಿಯೋಜನೆಯ ಪರ ಸಾಕ್ಷಿದಾರರನ್ನು ಬೆದರಿಸಿ ಸಾಕ್ಷ್ಯಧಾರಗಳನ್ನು ನಾಶಪಡಿಸುವ ಸಾಧ್ಯತೆ ಇದೆ ಎಂದೂ, ಈ ಪ್ರಕರಣದಲ್ಲಿ ತನಿಖೆ ಇನ್ನೂ ಚಾಲ್ತಿಯಲ್ಲಿದ್ದು, ಈಕೆಗೆ ನಿಯಮಿತ ಜಾಮೀನು ನೀಡಿದಲ್ಲಿ ಈಕೆ ವಿಚಾರಣೆಗೆ ಗೈರು ಹಾಜರಾಗಿ ವಿಚಾರಣೆ ಕುಂಠಿತವಾಗುವ ಸಾಧ್ಯತೆಗಳಿವೆ ಎಂದೂ, ಭಾರತ ದಂಡ ಸಂಹಿತೆ ಕಲಂ 370ರಡಿಯಲ್ಲಿ ಈಕೆ ಜಾಮೀನಿಗೆ ಅರ್ಹಳಲ್ಲ ಎಂದು ಹೇಳಿ, ತನಿಖಾ ವರದಿಯನ್ನು ಪರಿಗಣಿಸುವಂತೆ ವಿನಂತಿಸಿ, ಆಕೆಯ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿಕೊಂಡಿದ್ದಾರೆ.

4. ಕಡತವನ್ನು ಪರಿಶೀಲಿಸಲಾಯಿತು ಹಾಗೂ ಉಭಯತರರ ವಾದ ವಿವಾದವನ್ನು ಆಲಿಸಲಾಯಿತು.

5. ಈ ಹಂತದಲ್ಲಿ ನನ್ನ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೇ:-

1) ಅರ್ಜಿದಾರಳು/2ನೇ ಆರೋಪಿತಳು ಈ ಹಂತದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 439 ರಡಿಯಲ್ಲಿ ಜಾಮೀನನ್ನು ಪಡೆಯಲು ಅರ್ಹಳಿದ್ದಾಳೆಯೇ?

2) ಏನು ಆದೇಶ?

6. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ:-

ಅಂಶ ಒಂದು: ಸಕಾರಾತ್ಮಕವಾಗಿ,

ಅಂಶ ಎರಡು: ಅಂತಿಮ ಆದೇಶದಂತೆ, ಈ ಕೆಳಕಂಡಂತೆ:

ಕಾ ರ ಣ ಗ ಳು:

7. ಅಂಶ ಒಂದು: ಅರ್ಜಿದಾರಳು/2ನೇ ಆರೋಪಿತಳು, ತಾನು ಈ ಪ್ರಕರಣದಲ್ಲಿ ಆರೋಪಿಸಿದಂತಹ ಯಾವುದೇ ಕೃತ್ಯಗಳನ್ನು ಎಸಗಿರುವುದಿಲ್ಲವೆಂದೂ, ತನ್ನನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದೂ, ತನ್ನನ್ನು ಜಾಮೀನಿನ ಮೇಲೆ ಬಿಡುಗಡೆಗೊಳಿಸಬೇಕೆಂದು ತನ್ನ ಅರ್ಜಿಯಲ್ಲಿ ಪ್ರತಿಪಾದಿಸಿದ್ದಾಳೆ. ಅರ್ಜಿದಾರಳ ಪರ ವಕೀಲರು, ಮೇಲ್ನೋಟಕ್ಕೆ ಅರ್ಜಿದಾರಳ ವಿರುದ್ಧ ಯಾವುದೇ ಅಪಾದನೆಗಳು ಕಂಡು ಬರುತ್ತಿಲ್ಲವೆಂದೂ, ಅರ್ಜಿದಾರಳು ಹಾಲಿ ನ್ಯಾಯಾಂಗ ಬಂಧನದಲ್ಲಿದ್ದು, ಆಕೆಯನ್ನು ನ್ಯಾಯಾಂಗ ಬಂಧನದಲ್ಲಿಯೇ

ಮುಂದುವರೆಸಿದರೆ ಭವಿಷ್ಯಕ್ಕೆ ತುಂಬಲಾರದ ತೊಂದರೆಗಳು ಉಂಟಾಗುವ ಸಾಧ್ಯತೆಗಳಿವೆ ಎಂದೂ, ಆಕೆಗೆ ಜಾಮೀನು ಮಂಜೂರು ಮಾಡಿದಲ್ಲಿ ಆಕೆ ಅಭಿಯೋಜನಾ ಪರ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ, ಪುನಃ ಇಂತಹದೇ ಅಪರಾಧಗಳನ್ನು ಎಸಗುವ ಸಾಧ್ಯತೆಗಳಿರುವ ಕಾರಣ, ಆಕೆಗೆ ನಿಯಮಿತ ಜಾಮೀನು ಮಂಜೂರು ಮಾಡಬಾರದು ಎಂದು ಸರ್ಕಾರಿ ಅಭಿಯೋಜಕರು ವಾದಿಸಿದ್ದಾರೆ.

8. ದಿನಾಂಕ 30-12-2019 ರಂದು ಸಂಜೆ ಸುಮಾರು 6:30 ಗಂಟೆಯ ಸಮಯದಲ್ಲಿ ಪಿರ್ಯಾದಿದಾರರು ಠಾಣಾ ಸರಹದ್ದಿನ ಕಮ್ಮನಹಳ್ಳಿ ಮುಖ್ಯರಸ್ತೆಯಲ್ಲಿ ಗಸ್ತು ಮಾಡುತ್ತಿರುವಾಗ ಯಾರೋ ಒಬ್ಬ ವಿದೇಶಿ ಮಹಿಳೆ ಫೋನ್ ಮೂಲಕ ಗಿರಾಕಿಗಳನ್ನು ಬರಮಾಡಿಕೊಂಡು ಓಎಂಬಿಆರ್ ಲೇಔಟ್‌ನಲ್ಲಿ ಒಂದು ಪ್ಲಾಟ್‌ನಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದಾಳೆಂದು ಮಾಹಿತಿ ಸಿಕ್ಕ ಮೇರೆಗೆ ಸಿಬ್ಬಂದಿಗಳನ್ನು ಕರೆದುಕೊಂಡು ಸದರೀ ಸ್ಥಳಕ್ಕೆ ಹೋಗಿ ಜೀಪಿನಿಂದ ಇಳಿದು ನೋಡಲಾಗಿ ರಸ್ತೆಯ ಬದಿಯಲ್ಲಿ ಒಬ್ಬ ವಿದೇಶಿ ಮಹಿಳೆ ಫೋನ್‌ನಲ್ಲಿ ಮಾತನಾಡುತ್ತಾ ನಿಂತುಕೊಂಡಿದ್ದಳು. ಕೂಡಲೇ ಆಕೆಯನ್ನು ಸುತ್ತುವರೆದು ಅವಳ ಹೆಸರು, ವಿಳಾಸ ಮತ್ತು ಆಕೆಯ ಕೆಲಸದ ಬಗ್ಗೆ ಕೇಳಲಾಗಿ ಸಿಂತಿಯಾ ಎಂದು ತಿಳಿಸಿದಳು ಮತ್ತು ತಾನು ತನ್ನ ಸಂಬಂಧಿ ನೈಜೀರಿಯಾ ದೇಶದ ಪ್ರಜೆಯಾದ ಸಿ.ಜೆ.ರವರುಗಳು ಸೇರಿ ನಂ.306 ಎ.ಹೆಚ್. ಎಸ್ಟರ್ ಅಪಾರ್ಟ್‌ಮೆಂಟ್ ಪ್ಲಾಟ್ ನಂ.001. 1ನೇ ಮಹಡಿ, 6ನೇ ಮುಖ್ಯರಸ್ತೆ ಓಎಂಬಿಆರ್ ಲೇಔಟ್‌ನಲ್ಲಿರುವ ರಂಗನಾಥ್ ಎಂಬುವವರಿಗೆ ಸೇರಿ ಒಂದು ಪ್ಲಾಟ್‌ನ್ನು ಬಾಡಿಗೆಗೆ ಪಡೆದು ನಮ್ಮ

ದೇಶದ ಕಡೆಯ ಯುವತಿಯರನ್ನು ಭಾರತಕ್ಕೆ ಕರೆಯಿಸಿಕೊಂಡು ವೇಶ್ಯಾವಾಟಿಕೆ ನಡೆಸುತ್ತಿರುವುದಾಗಿ ತಿಳಿಸಿದ್ದು, ಈಕೆಯು ಕಾನೂನು ಬಾಹಿರವಾಗಿ ಅಕ್ರಮ ಹಣ ಸಂಪಾದಿಸುವ ಸಲುವಾಗಿ ವಿದೇಶದಿಂದ ಮಹಿಳೆಯರನ್ನು ಕರೆಯಿಸಿಕೊಂಡು ವೇಶ್ಯಾವಾಟಿಕೆ ದಂಧೆ ನಡೆಸುತ್ತಿರುವುದು ಖಚಿತಪಟ್ಟಿದರಿಂದ, ಈ ಬಗ್ಗೆ ಕಾನೂನು ಕ್ರಮ ಜರುಗಿಸಲು ದೂರನ್ನು ದಾಖಲಿಸಲಾಗಿದೆ ಎನ್ನುವುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ.

9. ಪ್ರಕರಣಕ್ಕೆ ಸಂಬಂಧಪಟ್ಟ ಪಿರ್ಯಾದಿದಾರರ ದೂರನ್ನು ಗಮನಿಸಿದಾಗ ಅರ್ಜಿದಾರಳು ಹಾಗೂ ಆಕೆಯ ಸಂಬಂಧಿ ಸೇರಿ ಅಕ್ರಮ ಹಣ ಸಂಪಾದಿಸುವ ಸಲುವಾಗಿ ವಿದೇಶದಿಂದ ಮಹಿಳೆಯರನ್ನು ಕರೆಯಿಸಿಕೊಂಡು ವೇಶ್ಯಾವಾಟಿಕೆ ದಂಧೆ ನಡೆಸುತ್ತಿದ್ದಾಳೆ ಎಂಬೆಲ್ಲಾ ಅಂಶಗಳು ಕೇವಲ ಸಾಕ್ಷ್ಯಾಧಾರಗಳಿಂದಲೇ ರುಜುವಾತಾಗಬೇಕಾಗಿರುವ ಸಂಗತಿಗಳಾಗಿವೆ ಮತ್ತು ಈ ಹಂತದಲ್ಲಿಯೇ ಅರ್ಜಿದಾರಳು/2ನೇ ಆರೋಪಿತಳು ಆರೋಪಿಸಿದಂತಹ ಅಪರಾಧಗಳನ್ನು ಎಸಗಿದ್ದಾಳೆ ಎಂಬ ಪೂರ್ವಭಾವನೆಯನ್ನು ತಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಮೇಲಾಗಿ, ಆರೋಪಿಸಿದಂತಹ ಅಪರಾಧಗಳ್ಯಾವುವು ಕಡ್ಡಾಯವಾಗಿ ಮರಣ ದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವಂತಹ ಅಪರಾಧಗಳಾಗಿರುವುದಿಲ್ಲ.

10. ಅರ್ಜಿದಾರಳು/2ನೇ ಆರೋಪಿತಳು ಹಾಲಿ ನ್ಯಾಯಾಂಗ ಬಂಧನದಲ್ಲಿದ್ದು, ರಿಮ್ಯಾಂಡ್ ಅರ್ಜಿಯ ಪ್ರತಿಯನ್ನು ಗಮನಿಸಿದಾಗ, ಆಕೆಯನ್ನು ಪೊಲೀಸ್ ಅಭಿರಕ್ಷೆಗೆ ಕೋರಿರದೇ ನ್ಯಾಯಾಂಗ ಬಂಧನಕ್ಕೆ ಕೋರಿರುವುದನ್ನು ಗಮನಿಸಿದಾಗ ಆಕೆಯು ತನಿಖೆಗೆ ಅವಶ್ಯಕಳಿರುವುದಿಲ್ಲ ಎನ್ನುವುದು

ವ್ಯಕ್ತವಾಗುತ್ತದೆ. ಅರ್ಜಿದಾರಳು/2ನೇ ಆರೋಪಿತಳ ವಿಳಾಸವನ್ನು ಗಮನಿಸಲಾಗಿ, ಆಕೆ ಬೆಂಗಳೂರಿನ ನಿವಾಸಿ ಎಂದು ಕಂಡು ಬರುತ್ತಿರುವುದರಿಂದ, ಸರ್ಕಾರಿ ಅಭಿಯೋಜಕರು ವ್ಯಕ್ತಪಡಿಸಿರುವ ಆತಂಕಗಳನ್ನು ಸೂಕ್ತ ಷರತ್ತುಗಳನ್ನು ವಿಧಿಸುವುದರೊಂದಿಗೆ ಅರ್ಜಿದಾರಳು/2ನೇ ಆರೋಪಿತಳಿಗೆ ನಿಯಮಿತ ಜಾಮೀನು ನೀಡಬಹುದಾಗಿದೆ ಎಂಬ ಅಭಿಪ್ರಾಯಕ್ಕೆ ಬಂದು ಮೇಲಿನ ಅಂಶ ಒಂದನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

11. ಅಂಶ ಎರಡುಃ ಅಂಶ ಒಂದರಲ್ಲಿ ನೀಡಿರುವ ಕಾರಣಗಳಿಂದ ಈ ಕೆಳಕಂಡ,

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 439ರಡಿಯಲ್ಲಿ ಅರ್ಜಿದಾರಳು/2ನೇ ಆರೋಪಿತಳಾದ ಸಿಂತಿಯಾ ಜೆನ್ನಿಫರ್ ಶಿಕಂದ ಈಕೆಯ ಪರವಾಗಿ ಸಲ್ಲಿಸಿದ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಬಾಣಸವಾಡಿ ಪೊಲೀಸ್ ಠಾಣೆಯ ಕ್ರೈಮ್ ನಂಬರ್ 702/2019 ರಲ್ಲಿ ಭಾರತ ದಂಡ ಸಂಹಿತೆ ಕಲಂ 370 ಹಾಗೂ ಐಟಿಪಿ ಕಲಂ 3, 4 ಮತ್ತು 5ರಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರಳು/2ನೇ ಆರೋಪಿತಳಿಗೆ ನಿಯಮಿತ ಜಾಮೀನು ಮಂಜೂರು ಮಾಡಲಾಗಿದೆ.

1. ಅರ್ಜಿದಾರಳು/2ನೇ ಆರೋಪಿತಳು 50,000/- ರೂಪಾಯಿಗಳಿಗೆ ವೈಯುಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೆ ಮೊತ್ತಕ್ಕೆ ಒಬ್ಬ ಜಾಮೀನುದಾರನನ್ನು ಬೆಂಗಳೂರಿನ ಮೆಯೋಹಾಲ್ ಘಟಕದ 11ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗೆ ತೃಪ್ತಿಯಾಗುವಂತೆ ನೀಡತಕ್ಕದ್ದು,
2. ಅರ್ಜಿದಾರಳು/2ನೇ ಆರೋಪಿತಳು ಹಾಗೂ ಜಾಮೀನುದಾರರು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು,
3. ಅರ್ಜಿದಾರಳು/2ನೇ ಆರೋಪಿತಳು ತನಿಖೆಗೆ ಸಹಕರಿಸತಕ್ಕದ್ದು,
4. ಅರ್ಜಿದಾರಳು/2ನೇ ಆರೋಪಿತಳು ಈ ಪ್ರಕರಣ ಇತ್ಯರ್ಥವಾಗುವವರೆಗೂ ನ್ಯಾಯಾಲಯದ ಮುಂದೆ ಪ್ರತಿ ವಿಚಾರಣಾ ದಿನಾಂಕದಂದು ತಪ್ಪದೇ ಹಾಜರಾಗತಕ್ಕದ್ದು ಹಾಗೂ ತನ್ನ ವಾಸಸ್ಥಳವನ್ನು ಬದಲಾಯಿಸಬೇಕಾದಲ್ಲಿ ನ್ಯಾಯಾಲಯದ ಅನುಮತಿ ಪಡೆಯತಕ್ಕದ್ದು,
5. ಅರ್ಜಿದಾರಳು/2ನೇ ಆರೋಪಿತಳು ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಅಭಿಯೋಜನೆಯ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾಧಾರಗಳನ್ನು ನಾಶಪಡಿಸಬಾರದು,

6. ಅರ್ಜಿದಾರಳು/2ನೇ ಆರೋಪಿತಳು ಭವಿಷ್ಯದಲ್ಲಿ ಈ ರೀತಿಯ ಯಾವುದೇ ಕೃತ್ಯಗಳನ್ನು ಎಸಗಬಾರದು.

*(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ನಂತರ ತಿದ್ದಿ ದಿನಾಂಕ 21ನೇ ಮಾಹೆ ಜನವರಿ, 2020ಸರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದ್ದೇನೆ)*

*(ಬಾಬಾಸಾಹೇಬ್ ಎಲ್. ಜಿನರಾಳ್ಕರ್),*
*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು ನಗರ.*

ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ (ಪ್ರತ್ಯೇಕ ಆದೇಶದಂತೆ) ಘೋಷಿಸಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 439ರಡಿಯಲ್ಲಿ ಅರ್ಜಿದಾರಳು/2ನೇ ಆರೋಪಿತಳಾದ ಸಿಂತಿಯಾ ಜೆನ್ನಿಫರ್ ಶಿಕಂದ ಈಕೆಯ ಪರವಾಗಿ ಸಲ್ಲಿಸಿದ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಬಾಣಸವಾಡಿ ಪೊಲೀಸ್ ಠಾಣೆಯ ಕ್ರೈಮ್ ನಂಬರ್ 702/2019 ರಲ್ಲಿ ಭಾರತ ದಂಡ ಸಂಹಿತೆ ಕಲಂ 370 ಹಾಗೂ ಐಟಿಪಿ ಕಲಂ 3, 4 ಮತ್ತು 5ರಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರಳು/2ನೇ ಆರೋಪಿತಳಿಗೆ ನಿಯಮಿತ ಜಾಮೀನು ಮಂಜೂರು ಮಾಡಲಾಗಿದೆ.

1. ಅರ್ಜಿದಾರಳು/2ನೇ ಆರೋಪಿತಳು 50,000/- ರೂಪಾಯಿಗಳಿಗೆ ವೈಯುಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೆ ಮೊತ್ತಕ್ಕೆ ಒಬ್ಬ ಜಾಮೀನುದಾರನನ್ನು ಬೆಂಗಳೂರಿನ ಮೆಯೋಹಾಲ್ ಘಟಕದ 11ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗೆ ತೃಪ್ತಿಯಾಗುವಂತೆ ನೀಡತಕ್ಕದ್ದು,

2. ಅರ್ಜಿದಾರಳು/2ನೇ ಆರೋಪಿತಳು ಹಾಗೂ ಜಾಮೀನುದಾರರು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು,
3. ಅರ್ಜಿದಾರಳು/2ನೇ ಆರೋಪಿತಳು ತನಿಖೆಗೆ ಸಹಕರಿಸತಕ್ಕದ್ದು,
4. ಅರ್ಜಿದಾರಳು/2ನೇ ಆರೋಪಿತಳು ಈ ಪ್ರಕರಣ ಇತ್ಯರ್ಥವಾಗುವವರೆಗೂ ನ್ಯಾಯಾಲಯದ ಮುಂದೆ ಪ್ರತಿ ವಿಚಾರಣಾ ದಿನಾಂಕದಂದು ತಪ್ಪದೇ ಹಾಜರಾಗತಕ್ಕದ್ದು ಹಾಗೂ ತನ್ನ ವಾಸಸ್ಥಳವನ್ನು ಬದಲಾಯಿಸಬೇಕಾದಲ್ಲಿ ನ್ಯಾಯಾಲಯದ ಅನುಮತಿ ಪಡೆಯತಕ್ಕದ್ದು,
5. ಅರ್ಜಿದಾರಳು/2ನೇ ಆರೋಪಿತಳು ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಅಭಿಯೋಜನೆಯ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾಧಾರಗಳನ್ನು ನಾಶಪಡಿಸಬಾರದು,
6. ಅರ್ಜಿದಾರಳು/2ನೇ ಆರೋಪಿತಳು ಭವಿಷ್ಯದಲ್ಲಿ ಈ ರೀತಿಯ ಯಾವುದೇ ಕೃತ್ಯಗಳನ್ನು ಎಸಗಬಾರದು.

*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು ನಗರ.*